# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 17/2025

ಸಿಡಬ್ಲ್ಯೂ: 10 / ಪಿಡಬ್ಲ್ಯೂ: 8

ದಿನಾಂಕ: 18.06.2026

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಲ್ಲಪ್ಪ ಮಡ್ಡಿ |
| ತಂದೆಯ ಹೆಸರು | : | ದುಂಡಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಸರ್ಕಲ ಪೋಲೀಸ ಇನ್ಸಪೆಕ್ಟರ, ಜಮಖಂಡಿ |
| ವಾಸ ಸ್ಥಳ | : | ಜಮಖಂಡಿ |

(ಸಾಕ್ಷಿಯು ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ.)

ಜಮಖಂಡಿ ಪೋಲೀಸ ಠಾಣೆಯ ಸರ್ಕಾರಿ ಮೊಬೈಲ ನಂ. 9480803934 ನೇದ್ದರ ವಿಡಿಯೋ ಮೂಲಕ ಕ್ವಾಲಿಟಿ ಕಂಟ್ರೋಲ್ ಕಚೇರಿಯಿಂದ ಕಾನ್ಫರೆನ್ಸ ಕೊಠಡಿಯಲ್ಲಿ ಸಾಕ್ಷಿದಾರರು ಹಾಜರಿದ್ದಾರೆ. ಶ್ರೀ ಎಸ್.ಪಿ. ತುಪ್ಪದ, ಹೆಚ್.ಸಿ.424 ಇವರನ್ನು ರಿಮೋಟ್ ಪಾಯಿಂಟ್ ಕೊ-ಆರ್ಡಿನೇಟರ್ ಎಂದು ನೇಮಿಸಲಾಯಿತು. ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಗೂಗಲ್ ಮೀಟ್ http://meet.google.com/mff-voxg-qao ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್ ವರ್ಕನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿ ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ಬೆಟಗೇರಿ ಪೋಲೀಸ ಠಾಣೆಯಲ್ಲಿ ದಿ: 05.08.2016 ರಿಂದ 03.08.2018 ರ ವರೆಗೆ ಪಿಎಸ್ಐ ಆಗಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 16.01.2017 ರಂದು, ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-9 ರವರಿಂದ ವಹಿಸಿಕೊಂಡು, ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಪ್ರಾಸಾ-5, 6, ಚಾಸಾ-4, ಪ್ರಾಸಾ-3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

3. ದಿಃ 22.01.2017 ರಂದು, 3 ನೇ ಆರೋಪಿತನನ್ನು ದಸ್ತಗಿರಿ ಮಾಡಿ ಆತನನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲಾಯಿತು.

4. ದಿಃ 25.06.2017 ರಂದು 2 ನೇ ಆರೋಪಿತನನ್ನು ದಸ್ತಗಿರಿ ಮಾಡಿ ಆತನನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲಾಯಿತು.

5. ದಿಃ 13.07.2017 ರಂದು, ಸುಟ್ಟ ಕಾರಿನ ಲುಕ್ಸಾನು ಅಂದಾಜು ಮೌಲ್ಯ ಪೂರೈಸುವಂತೆ ಆರ್.ಟಿ.ಓ. ಕಚೇರಿಗೆ ಪತ್ರ ಬರೆದೆನು.

6. ದಿಃ 06.09.2017 ರಂದು, ಆರ್.ಟಿ.ಓ. ರವರು ಸುಟ್ಟ ಕಾರಿನ ಲುಕ್ಸಾನು ಅಂದಾಜು ಮೌಲ್ಯವನ್ನು ನಿಪಿ-8 ರಂತೆ ಪೂರೈಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು.

7. ದಿಃ 15.12.2017 ರಂದು, ಸಾಕ್ಷಿದಾರರಾದ ಪ್ರಾಸಾ-4 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಹಾಗೂ ಅದೇ ದಿನ ನ್ಯಾಯಾಲಯದ ಆದೇಶದ ಮೇರೆಗೆ ಸುಟ್ಟ ಕಾರನ್ನು ಅವರಿಗೆ ಬಿಡುಗಡೆ ಮಾಡಿರುತ್ತೇನೆ.

8. 1 ನೇ ಆರೋಪಿ ಪರಾರಿ ಇದ್ದ ಕಾರಣ ಮತ್ತು ತನಿಖೆ ಪೂರ್ಣಗೊಂಡ ಕಾರಣ, ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿರುತ್ತೇನೆ.

## ಪಾಟಿ ಸವಾಲುಃ ಶ್ರೀ ಜೆ.ಎ.ಉದೋಜಿ, ಆರೋಪಿತರ ಪರ ವಕೀಲರಿಂದಃ

9. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ನೋಟೀಸುಗಳನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು, ಮೌಖಿಕವಾಗಿ ಹೇಳಲಾಗಿತ್ತು ಎಂದು ಹೇಳುತ್ತಾರೆ.

10. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ 1 ನೇ ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

## ಮರು ವಿಚಾರಣೆ – ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**